ಕಿಲೋಮೀಟರು ರೂಟುಮಾರ್ಚು. ಲೈಟ್ ಮಷಿನ್‌ಗನ್, ರೈಫಲ್‌ಗಳ ಫೈರಿಂಗ್ ತರಬೇತಿ. ರಾತ್ರಿ ಮಂಚಕ್ಕೆ ತಲೆ ಹಚ್ಚಿದರೆ ಸತ್ತೇಹೋದಂತೆ ಬಿದ್ದಿರುತ್ತಿದ್ದರು ಎಲ್ಲಾ. ರಾತ್ರಿ ಯಾವ ಹೊತ್ತಿನಲ್ಲಾದರೂ ಅನಿರೀಕ್ಷಿತವಾಗಿ ಸೀಟಿಯಾಗುತ್ತಿತ್ತು. ಸತ್ತವರು ಜೀವತಳೆದು ಸಾಲುಗಟ್ಟಲು ಐದು ನಿಮಿಷ ಅವಕಾಶ; ತಪ್ಪಿದರೆ ಶಿಕ್ಷೆ. ವರ್ಷಗಟ್ಟಲೆ ತರಬೇತಿಯ ಕೊನೆಗೊಮ್ಮೆ ಆ ದಿನ ಬಂದಿತ್ತು. ಪಾಸಿಂಗ್‌ಔಟ್ ಆಗಿ ಕಾಶ್ಮೀರದ ಬಾರಾಮುಲ್ಲಾದಲ್ಲಿರುವ ಮೌಂಟೇನ್ ರೆಜಿಮೆಂಟಿಗೆ ಕಳಿಸಿದರು. ಆಗ ಜಮ್ಮುವಿಗಷ್ಟೇ ರೈಲು. ಅಲ್ಲಿಂದ ಮಿಲಿಟರಿ ಕಾನ್ವಾಯಿ. ಒಂದರ ಹೆಗಲಮೇಲೊಂದು ನಿಂತಂತೆ ಹಿಮಹೊದ್ದ ಬೆಟ್ಟಗಳು. ಒಂದರ ಮಡಿಲಿಂದ ಇನ್ನೊಂದು ಎತ್ತಿಕೊಳ್ಳುತ್ತ ಗಮ್ಯ ಸೇರಿಸಿದ್ದವು. ಬ್ಯಾರಕ್ಕಿನಲ್ಲಿ ವಸತಿ, ಲಂಗರೆಂಬ ಸಾಮೂಹಿಕ ಊಟದಮನೆ. ಅಲ್ಲಿ ಹೊಟ್ಟೆತುಂಬಾ ಊಟ, ತಿಂಡಿ, ಚಹಾ. ಅಷ್ಟೂ ಜನ ಒಂದು ಗುಂಪು; ಒಂದು ಮುಷ್ಟಿಯಂತೆ. ಸಮಯ ಕಳೆದು ಹೋಗಿತ್ತು. ಇಲ್ಲೂ ವ್ಯಾಯಾಮ, ಡ್ರಿಲ್ಲು, ಕೆಲಸ ಅಂತ ವ್ಯಸ್ತವಾಗಿದ್ದರೂ ವಿಶ್ರಾಂತಿ, ನಿದ್ದೆ, ಮನರಂಜನೆ ಇತ್ತು. ಚಳಿಗೆ ಉಣ್ಣೆಬಟ್ಟೆ, ಕುಡಿಯಲು ರಮ್, ವಾರದಲ್ಲಿ ಮೂರುದಿನ ಮಾಂಸ. ತಾನೂ ಕೆಲವರಂತೆ ಮಾಂಸ, ಮದಿರೆಯ ಮಜಾಕ್ಕೇ ತೃಪ್ತನಾಗಿದ್ದರೆ ಇವತ್ತು ಇಲ್ಲಿರುತ್ತಿರಲಿಲ್ಲ. ಹಿಡಿದೆತ್ತಿದ ಯಾವುದೋ ಅದೃಶ್ಯ ಕೈಗಳಿಗೆ ಧನ್ಯವಾದ ಅರ್ಪಿಸುವಂತೆ ಎದೆಯ ಮೇಲೆ ಅಂಗೈಯಿಟ್ಟುಕೊಂಡರು. ರೈಲಿನ ಹೊರಗೆ ಕತ್ತಲೆಯಲ್ಲಿ ಯಾವುದೊ ಊರೊಂದರ ದೀಪಗಳು ಸರಿದುಹೋಗುತ್ತಿದ್ದವು. ಆ ಸ್ಥಾವರ ಜಗತ್ತು ನಿದ್ದೆಗೆ ಜಾರಿದೆ. ಓಡುವ ಈ ರೈಲಿನಲ್ಲಿ ತನ್ನದು ಜಂಗಮ ಜಗತ್ತು ಅನ್ನುವ ಜಿಜ್ಞಾಸೆ ಮೂಡಿತು. ಊರಿನಲ್ಲೀಗ ಹೆಂಡತಿ, ತಾಯಿ ಮಲಗಿರಬಹುದೇ ಅಂತ ಯೋಚಿಸುತ್ತ ಕಣ್ಣು ಮುಚ್ಚಿದರು. ದಿಲ್ಲಿಯಲ್ಲಿ ರೈಲು ಬದಲಿಸಿ, ಜಮ್ಮುದಲ್ಲಿ ಟ್ರಾನ್ಸಿಟ್‌ಕ್ಯಾಂಪ್ ಸೇರಿ, ಅಲ್ಲಿಂದ ಆರ್ಮಿ ವಾಹನದಲ್ಲಿ ಅಖನೂರ್, ನೌಶೇರಾ, ರಜೌರಿ ಮಾರ್ಗವಾಗಿ ಪೂಂಛ್ ತಲುಪಿದವರಿಗೆ ತಮ್ಮದೆ ಮತ್ತೊಂದು ಮನೆಗೆ ಬಂದ ಭಾವನೆ.

★★★

ಜೇಸಿಓ ಲೈನು, ಮೆಸ್ಸುಗಳಿರುವ ಬಂಕರುಗಳಿಂದ ಸ್ವಲ್ಪ ದೂರ ಆಫೀಸುಗಳಿರುವ ಬಂಕರುಗಳು. ಬೆಳಿಗ್ಗೆ ಮೆಸ್ಸಲ್ಲಿ ತಿಂಡಿ ತಿಂದು ನೇರ ಆಫೀಸಿಗೆ ಬರುತ್ತಿದ್ದಂತೆ ಸಿಪಾಯಿ ರಾಮಲಾಲ ಬಂದು, 'ಓಸೀ ಸಾಹೇಬರು ಕರೀತಿದಾರೆ' ಅಂದ. ಕ್ಯಾಪು ಧರಿಸಿ, ಡ್ರೆಸ್ಸು ಸರಿಯಿದೆ ಅಂತ ನಿಲುವುಗನ್ನಡಿಯಲ್ಲಿ ನೋಡಿಕೊಂಡು ಹೊರಟರು. ಸೆಲ್ಯೂಟ್ ಹೊಡೆದು ಗುಡ್ ಮಾರ್ನಿಂಗ್ ಹೇಳಿದವರನ್ನು ರಜೆ ಹೇಗಿತ್ತು ಅನ್ನುವ ಬಗ್ಗೆ ವಿಚಾರಿಸಿ, ಒಂದೆರಡು ಮಾತಾಡಿ ವಿಷಯಕ್ಕೆ ಬಂದರು ಓಸಿ: '...ಡಿಸ್ಟರ್ಬಿಂಗ್ ಸುದ್ದಿಯಿದೆ, ನಮ್ಮ ಸೆಕ್ಟರಿನಲ್ಲು ಉಗ್ರರು ನುಸುಳೋ ಪ್ರಯತ್ನದಲ್ಲಿರೊ ವಾಸನೆ ಇಂಟೆಲಿಜೆನ್ಸಿಗೆ ಸಿಕ್ಕಿದೆ. ಹೈ ಅಲರ್ಟ್ ಆದೇಶ ನಾರ್ದರ್ನ್ ಕಮಾಂಡಿಂದ ಬಂದಿದೆ. ಅದರಲ್ಲಿ ನಮ್ಮವೂ ಮೂರು ಚೆಕ್ ಪೋಸ್ಟಗಳಿವೆ...'

'ಸರ್... ತಮ್ಮ ಆದೇಶವೇನು?'

'ಚೆಕ್‌ಪೋಸ್ಟಿನಲ್ಲಾಗಲೆ ಸೆಂಟ್ರಿ ಸಂಖ್ಯೆ ಏರಿಸಿಯಾಗಿದೆ. ಎರಡು ಗುಂಪಿನಲ್ಲಿ ಹೆಚ್ಚುವರಿ ಪೆಟ್ರೋಲಿಂಗ್ ನಡೀಬೇಕು. ಬೇರೆಬೇರೆ ಸಮಯ ಆರಿಸಿಕೊಂಡು, ಅನಿರೀಕ್ಷಿತ ಭೆಟ್ಟಿ ಕೊಡಬೇಕು. ಚಿಕ್ಕ ಅಸಹಜತೆ ಕಂಡರೂ ಅಲಕ್ಷಿಸಕೂಡದು. ಇವತ್ತಿಂದಲೇ ಶುರುವಾಗಬೇಕು. ಪ್ರತಿದಿನ ಬೆಳಿಗ್ಗೆ ಎಚ್‌ಕ್ಯೂಗೆ ವರದಿ ಹೋಗಬೇಕು. ಮತ್ತೊಮ್ಮೆ ಹೇಳತಿದೇನೆ, ರಾತ್ರಿ ಎಷ್ಟೇ